ನಬಾರ್ಡ್ ಯೋಜನೆಯಡಿ ಮಂಜೂರಾದ ಕ್ಷೇತ್ರವಾರು ಕಾಮಗಾರಿಗಳು

554 (76) ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಬಾರ್ಡ್ ಯೋಜನೆಯಡಿ ಮಂಜೂರಾದ ಕ್ಷೇತ್ರವಾರು ಕಾಮಗಾರಿಗಳು ಯಾವುವು (ವಿವರ ನೀಡುವುದು).

ಆ) ಈ ಕಾಮಗಾರಿಯ ಹಂಚಿಕೆಯನ್ನು ಯಾವ ಆಧಾರದ ಮೇಲೆ ಹಂಚಲಾಗುತ್ತದೆ.

ಇ) ಈ ಹಂಚಿಕೆಯಲ್ಲಿ ಏರುಪೇರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಕಾಮಗಾರಿಗಳು ಕ್ಷೇತ್ರವಾರು ಮಂಜೂರಾಗಿರುವುದಿಲ್ಲ. ಈವರೆಗೆ ಲೋಕೋಪಯೋಗಿ ಇಲಾಖೆಯಡಿ ಮಂಜೂರಾದ ರಸ್ತೆ ಮತ್ತುಸೇತುವೆ ಕಾಮಗಾರಿಗಳು ಹಬ್ಬಿರುವ ಕ್ಷೇತ್ರಾ ವಾರು ವಿವರವನ್ನು ಪ್ರಶ್ನೆ 1122ರ ಅನುಬಂಧದಲ್ಲಿ ನೀಡಲಾಗಿದೆ.

ಆ) ನಬಾರ್ಡ್ ಸಂಸ್ಥೆಯು ಗ್ರಾಮೀಣ ಹಿನ್ನೆಲೆಯುಳ್ಳ ರಸ್ತೆ ಅಭಿವೃದ್ಧಿ ಮತ್ತು ಸೇತುವೆ ಕಾಮಗಾರಿಗಳ ಆದ್ಯತೆ, ಅವಶ್ಯಕತೆಯನ್ನು ಪರಿಶೀಲಿಸಿ ಸಂಸ್ಥೆಯ ನಿಯಮಾವಳಿಗೊಪ್ಪುವ ಕಾಮಗಾರಿಗಳಿಗೆ ಕಾಮಗಾರಿವಾರು ಅನುಮೋದನೆ ನೀಡುತ್ತದೆಯಾದ್ದರಿಂದ ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

1994-95 ರಿಂದ 31.1.1999ರವರೆಗೆ ನಬಾರ್ಡ್ ಸಂಸ್ಥೆಯಿಂದ ಬಿಡುಗಡೆಯಾದ ಧನ ಸಹಾಯ

555 (87) ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಸ್ತೆ ಅಭಿವೃದ್ಧಿಗೆ 1994-95ರಿಂದ31.01.1999ರ ವರೆಗೆ ನಬಾರ್ಡ್ ಸಂಸ್ಥೆಯು ನೀಡಿದ ಧನ ಸಹಾಯ ಮತ್ತು ಸಾಲ ಎಷ್ಟು ?

ಆ) ಈ ಹಣವನ್ನು ಯಾವ ಯಾವ ಬಾಬ್ತಿಗೆ ವ್ಯಯ ಮಾಡಲಾಗಿದೆ ? (ವರ್ಷಾವಾರು ಹಾಗೂ ಜಿಲ್ಲಾವಾರು ವಿವರಗಳನ್ನು ನೀಡುವುದು).

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಈವರೆಗೆ ಲೋ.ಇ.ಯಡಿ ನಬಾರ್ಡ್‌ನಿಂದ ಮಂಜೂರಾದ ಕಾಮಗಾರಿಗಳ ಮೊತ್ತ 313.00 ಕೋಟಿ ರೂ.ಗಳು ಮತ್ತು ಸಾಲ ಸಹಾಯ 280.00 ಕೋಟಿರೂ.ಗಳು.

ಆ) ಲೋ.ಇ.ವ್ಯಾಪ್ತಿಯಡಿ ಈ ಹಣವನ್ನು ರಸ್ತೆ ಅಭಿವೃದ್ಧಿ ಮತ್ತು ಸೇತುವೆ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.